

ಡಾ.ವಿನೋದ ಛೆಬ್ಬಿ

**ಅನೇಕ ಹೆಂಗಸರಿಗೆ ಸಂಭೋಗದಲ್ಲಿ ನೋವೆನ್ನುವುದು ಸಾಂಸ್ಕೃತಿಕ ಬಳುವಳಿಯಾಗಿ ಬರುತ್ತದೆ!**

# 117: ಹೆಣ್ಣಿನ ಕಾಮಪ್ರಜ್ಞೆ–2

ಸಂದಿಗ್ಧಾಳ ಪ್ರೇಮಭರಿತ ದಾಂಪತ್ಯದ ಕುರಿತು ಮಾತಾಡುತ್ತಿದ್ದೇವೆ. ಸಂಭೋಗದಲ್ಲಿ ಜನನಾಂಗದ ಸ್ಪರ್ಶವಾಗದೆ ನೋವೆಂದು ಭಯಪಡುವ ಸಂದಿಗ್ಧಾಗೆ 'ನೀವು ಏಕೆ ಮದುವೆಯಾದಿರಿ? ಮದುವೆ ಆಗಲು ಕಾರಣವೇನು?' ಎಂದು ಕೇಳಿದೆನೆಂದು ಹೋದಸಲ ಹೇಳಿದ್ದೆ.

ಹಿರಿಯರ ಆಯ್ಕೆಯ ಮೇರೆಗೆ ಮದುವೆಯಾದ ಹೆಂಗಸರಿಗೆ ಅವರ ಮದುವೆಯ ಉದ್ದೇಶದ ಬಗೆಗೆ ವಿಚಾರಿಸಿದರೆ ಸಾಮಾನ್ಯವಾಗಿ ಏನು ಹೇಳುತ್ತಾರೆ? ಸಾಂಗತ್ಯ, ಸಹ–ವಾಸ, ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ, ಸ್ವಂತ ಕುಟುಂಬ, ಮಕ್ಕಳು ಮುಂತಾದ ವೈಯಕ್ತಿಕ ಉದ್ದೇಶಗಳ ಬಗೆಗೆ ಹೇಳುತ್ತಾರೆ. ಇನ್ನು ಕೆಲವರು ಬದುಕಿನ ಒಂದು ಘಟ್ಟದಿಂದ ಇನ್ನೊಂದಕ್ಕೆ ಪಯಣಿಸಲು ಬಯಸಿರುತ್ತಾರೆ. ಕೆಲವರು ತಾಯ್ತಂದೆಯರ ಒತ್ತಾಯವನ್ನು ಸಹಿಸದೆ ಒಪ್ಪಿದರೆ, ಮತ್ತೆ ಕೆಲವರು ತಾಯ್ತಂದೆಯರನ್ನೇ ಸಹಿಸದೆ ಅವರಿಂದ ದೂರವಾಗುವುದಕ್ಕಾಗಿ ಆಗುತ್ತಾರೆ. ಆದರೆ ಸಂದಿಗ್ಧಾ ಹೇಳಿದ್ದೇ ಬೇರೆಯಾಗಿತ್ತು.

'ಮದುವೆ ಯಾಕಾದೆ? ಎಲ್ಲರೂ ಆಗುತ್ತಾರೆ, ಅದಕ್ಕೆ ನಾನೂ ಆಗಿದ್ದೇನೆ. ಮದುವೆಯಾಗುವುದು ನಮ್ಮ ಸಂಸ್ಕೃತಿಯಲ್ಲೇ ಬಂದಿದೆ!' ಇದೆಂಥಾ ವಿಚಿತ್ರ ಪ್ರಶ್ನೆ ಕೇಳುತ್ತಿದ್ದೀರಿ ಎಂಬಂತಿತ್ತು ಆಕೆಯ ಉತ್ತರ. ಆಕೆಯ 'ಎಲ್ಲರೂ' ಅನ್ನುವುದು ಸ್ತ್ರೀಪುರುಷರಿಬ್ಬರನ್ನೂ ಒಳಗೊಳ್ಳುತ್ತದೆಯೇ ಎಂದು ಕೇಳಿ, ಸ್ತ್ರೀಯರ ಬಗೆಗೆ ಮಾತ್ರ ಹೇಳುತ್ತಿದ್ದಾಳೆ ಎಂಬುದನ್ನು ಖಚಿತಪಡಿಸಿಕೊಂಡೆ. ತನ್ನ ಹಿರಿಯ, ತನ್ನ ತಲೆಮಾರಿನ, ಹಾಗೂ ತನಗೆ ಗೊತ್ತಿರುವ ಸ್ತ್ರೀ ಸಮೂಹದವರೆಲ್ಲ ಮದುವೆಯಾಗಿದ್ದಾರೆ. ತಾಳಿ ಕಟ್ಟಿಸಿಕೊಂಡು, ಕಾಲುಂಗರ ಹಾಕಿಕೊಂಡು, 'ನಾನೂ ಹೆಣ್ಣು' ಎಂಬ ಪ್ರಜ್ಞೆ ಬೆಳೆಸಿಕೊಳ್ಳುತ್ತ ಸಮೂಹದೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ತಾನು ಕೂಡ ಈ ಸಮೂಹ ಪ್ರಜ್ಞೆಯ (**collective unconscious** – ಸಮಷ್ಟಿ ಪ್ರಜ್ಞೆ) ಭಾಗವಾಗಬೇಕೆಂದು ಸಂದಿಗ್ಧಾಳ ಉದ್ದೇಶ. ಅಂದರೆ, ಇವಳ ವಿವಾಹವು ವೈಯಕ್ತಿಕ ಬಯಕೆಯಿಂದಲ್ಲ, ಸಮೂಹ ಪ್ರಜ್ಞೆಯಿಂದ ಪ್ರೇರಿತವಾಗಿದೆ!

ಇಲ್ಲೊಂದು ಸಂದೇಹ: ಸಂದಿಗ್ಧಾ ಸಮೂಹ ಪ್ರಜ್ಞೆಯಿಂದ ಮದುವೆಗೆ ಒಪ್ಪಿಕೊಂಡವಳು, ಅದೇ ಸಮೂಹ ಪ್ರಜ್ಞೆಯಿಂದ (ತನ್ನ ಅಮ್ಮ, ಅಜ್ಜಿ, ಹಾಗೂ ಗೊತ್ತಿರುವ ಎಲ್ಲ ಹೆಂಗಸರೂ ಅನುಸರಿಸಿದಂತೆ) ಗಂಡನಿಗೆ ಮೈ ಒಪ್ಪಿಸಿಕೊಳ್ಳಬಹುದಲ್ಲ? ವಿಚಿತ್ರವೆಂದರೆ, ಇದಕ್ಕೂ ಸಮೂಹ ಪ್ರಜ್ಞೆಯೇ ಅಡ್ಡಿಯಾಗಿದೆ. ಇದು ಹೇಗೆಂದರೆ, ಹಿರಿಯರು ಆರಿಸಿದವನಿಂದ ತಾಳಿ ಕಟ್ಟಿಸಿಕೊಂಡ ಹೆಣ್ಣೊಬ್ಬಳು ಗಂಡನಿಗೆ ಮೈ ಒಪ್ಪಿಸಿಕೊಳ್ಳಲು ಯೋಚಿಸುತ್ತಾಳೆ ಎಂದುಕೊಳ್ಳಿ. ಆಕೆಗೆ ತನ್ನ ಲೈಂಗಿಕ ಬೇಕುಬೇಡಗಳ ಬಗೆಗೆ ಸ್ಪಷ್ಟತೆ ಇಲ್ಲದಿದ್ದರೆ, ಅಥವಾ ಬರಲಿರುವ ಅನುಭವಕ್ಕೆ ತೆರೆದುಕೊಳ್ಳಲು ಸಿದ್ಧಳಿಲ್ಲದಿದ್ದರೆ ಕಿರಿಕಿರಿ, ಅಸಹ್ಯ ಖಂಡಿತವಾಗಿಯೂ ಆಗುತ್ತದೆ. ಎಷ್ಟಾದರೂ ಒಬ್ಬ ಅಪರಿಚಿತನ ಎದುರು ಬೆತ್ತಲೆಯಾಗುವುದು ತುಂಬ ಸೂಕ್ಷ್ಮವಾದ ಭಾವುಕ ವಿಚಾರ. ತನ್ನ ಭಾವನೆಗಳನ್ನು ಅಲಕ್ಷ್ಯಿಸುವಾಗ ಆಗುವ ನೋವು ಭಾವನಾತ್ಮಕವಾಗಿದ್ದರೂ ಶರೀರದಿಂದ ಹುಟ್ಟಿದ್ದು ಎಂದು ತಪ್ಪಾಗಿ ಅರ್ಥೈಸಲಾಗುತ್ತದೆ – ಮಾನಸಿಕ ಒತ್ತಡ ಹೆಚ್ಚಾದಾಗ ತಲೆನೋವು ಎಂದು ಶರೀರಜನ್ಯವನ್ನಾಗಿ ಮಾಡುವಂತೆ. ಸಾಕಾಗದ್ದಕ್ಕೆ ಮೆದುಳು ಶಾರೀರಿಕ ಹಾಗೂ ಭಾವನಾತ್ಮಕ ನೋವುಗಳ ನಡುವಿನ ವ್ಯತ್ಯಾಸವನ್ನು ಅರಿಯಲಾರದೆ ಎಲ್ಲವನ್ನೂ ಶರೀರಜನ್ಯವೆಂದೇ ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಈ ಸಂದೇಶವು ತಲತಲಾಂತರ ಪ್ರಸಾರವಾಗುತ್ತ, 'ಎಲ್ಲ ಸ್ತ್ರೀಯರಿಗೂ ಮೊದಲ ಸಂಭೋಗದಲ್ಲಿ ನೋವಾಗುತ್ತದೆ' ಎಂಬ ನಂಬಿಕೆ ಪ್ರಚಲಿತವಾಗಿದೆ. ನೋವಿನ ಅನಿಸಿಕೆ ನಮ್ಮ ಸಮುದಾಯದಲ್ಲಿ ಎಷ್ಟರ ಮಟ್ಟಿಗೆ ಬೇರೂರಿದೆ ಎಂದರೆ, ಮೊದಲ ಸಂಭೋಗದಲ್ಲಿ ನೋವಾಗದಿದ್ದರೆ ಅದು ಮೊದಲ ಸಂಭೋಗ ಇರಲಿಕ್ಕಿಲ್ಲ ಎಂಬ ಸಂದೇಹಕ್ಕೆ ಎಡೆಮಾಡಿ ಕೊಡುವಂತಿದೆ! ಮುಸ್ಲಿಮ್ ಮಹಿಳೆಯೊಬ್ಬಳ ಜೊತೆಗೆ ಮೊದಲ ಸಲದ ಸಂಭೋಗವು ಸರಾಗವಾಗಿ ಆಗಿದ್ದಕ್ಕೆ ಆಕೆಯ ಗಂಡ ನಿಕಾ ಆದ ಮಾರನೆಯ ದಿನ ತಲಾಖ್ಗೆ ಹೊರಟು ನನ್ನ ಬಳಿ ಬಂದಿದ್ದಿದೆ.

ಹೀಗೆ ಸಂದಿಗ್ಧಾ ಸಂಭೋಗದ ಪ್ರಯತ್ನಕ್ಕೆ ಒಳಗಾಗದಿದ್ದರೂ ಸಮೂಹ ಪ್ರಜ್ಞೆಯ ಜೊತೆಗೆ ತನ್ನನ್ನು ಗುರುತಿಸಿಕೊಳ್ಳುತ್ತ ತನ್ನದಲ್ಲದ ನೋವನ್ನು ಅನುಭವಿಸುತ್ತ ಬಂದಿದ್ದಾಳೆ.!

(ಹಾಗೆಂದು ಸಂಭೋಗದ ನೋವಿಗೆ ಶಾರೀರಿಕ ಕಾರಣಗಳಿಲ್ಲವೆ? ಖಂಡಿತವಾಗಿಯೂ ಇವೆ – ಗಡುಸಾದ ಕನ್ಯಾಪೊರೆ, ಅಗಲ ಕಿರಿದಾದ ಯೋನಿ, ಇಬ್ಭಾಗ ಯೋನಿ, ಒಣಯೋನಿ, ಅನನುಕೂಲ ಸಂಭೋಗದ ಭಂಗಿ, ಇತ್ಯಾದಿ. ಆದರೆ ನಾವೀಗ ಚರ್ಚಿಸುತ್ತಿರುವುದು ಶರೀರ ಮೂಲದ ನೋವಿನ ಕಾರಣಗಳ ಬಗೆಗಲ್ಲ, ಮನೋಮೂಲದಿಂದ ಉಂಟಾಗುವ ನೋವಿನ ಬಗೆಗೆ.)

ಹೆಂಗಸರು ಸಮೂಹ ಪ್ರಜ್ಞೆಯನ್ನು ಪಕ್ಕಕ್ಕಿಟ್ಟು ಸ್ವಪ್ರಜ್ಞೆಯಿಂದ ಲೈಂಗಿಕ ಸಂಪರ್ಕ ಮಾಡಿದರೆ ಹೇಗಿರಬಹುದು? ಸ್ವಂತ ಇಷ್ಟದಿಂದ ಸಂಭೋಗದಲ್ಲಿ ಒಳಗೊಂಡಾಗ ನೋವಿನ ಪ್ರಶ್ನೆಯೇ ಬರಲಿಲ್ಲವೆಂದು ಅನೇಕ ಅವಿವಾಹಿತ ಮಹಿಳೆಯರು ನನ್ನೊಡನೆ ಹಂಚಿಕೊಂಡಿದ್ದಾರೆ. ಮನಸ್ಸು ಒಪ್ಪದಿದ್ದಾಗ ಶಾರೀರಿಕ ತೊಂದರೆ ಇಲ್ಲದಿದ್ದರೂ ನೋವಿನ ಅನುಭವ ಆಗಲು ಸಾಧ್ಯ ಎನ್ನುವುದಕ್ಕೆ ದೃಷ್ಟಾಂತ ಇಲ್ಲಿದೆ: ಒಬ್ಬಳು ತನ್ನ ಪ್ರೇಮಿಯನ್ನು ಮದುವೆಯಾಗಿ ಕೆಲವು ಕಾಲ ಲೈಂಗಿಕ ಸುಖ ಅನುಭವಿಸಿದ್ದಾಳೆ. ದುರದೃಷ್ಟವಶಾತ್ ಆತ ತೀರಿಹೋದಾಗ ಒಂಟಿಯಾಗಿ ಬಾಳಬೇಕೆಂದರೂ ಹಿರಿಯರ ಒತ್ತಾಯಕ್ಕೊಳಗಾಗಿ ಮನಸ್ಸಿಲ್ಲದೆ ಇನ್ನೊಬ್ಬನನ್ನು ಮದುವೆಯಾಗಿದ್ದಾಳೆ. ಅವನೊಡನೆ ಆಕೆಗೆ ನೋವು ಕಾಣಿಸಿಕೊಂಡು ಸಂಭೋಗ ಅಸಾಧ್ಯವಾಗಿದೆ. ಮೊದಲ ದಾಂಪತ್ಯದಲ್ಲಿ ಇಲ್ಲದಿದ್ದ ನೋವು ಎರಡನೆಯ ದಾಂಪತ್ಯದಲ್ಲಿ ಕಾಣಿಸಿಕೊಳ್ಳಬೇಕೆಂದರೆ ಮನೋಮೂಲದ್ದು ಎನ್ನುವುದರಲ್ಲಿ ಸಂದೇಹವಿಲ್ಲ. ಇನ್ನೊಂದು ದೃಷ್ಟಾಂತ ಹದಿನೇಳು ವರ್ಷಗಳ ಹಿಂದಿನದು. ಮೂವತ್ತರ ಗಂಡ ತಾನು ಪ್ರೀತಿಸಿ ಮದುವೆಯಾದ ಇಪ್ಪತ್ತರ ಹೆಂಡತಿಯು ಸಂಭೋಗಕ್ಕೆ ಒಪ್ಪುತ್ತಿಲ್ಲವೆಂದು ನನ್ನಲ್ಲಿಗೆ ಕರೆತಂದಿದ್ದ. ಆಕೆಗೆ ನೋವಿನ ಭಯವಿತ್ತು. ಇನ್ನೇನು ಚಿಕಿತ್ಸೆ ಕೈಗೊಳ್ಳಬೇಕು ಎನ್ನುವಾಗ ಒಂದು ದಿನ ಹೆಂಡತಿ ಒಬ್ಬಳೇ ಭೇಟಿಯಾಗಿ ತನ್ನ ಅನುಭವವನ್ನು ಹಂಚಿಕೊಂಡಳು. ಆಕೆಯ ಆಫೀಸಿನಲ್ಲಿ ಇಪ್ಪತ್ತೆರಡರ ಒಬ್ಬ ಹುಡುಗ ಇದ್ದಾನೆ. ಅವನು ತಾನು ಮನಸ್ಸು ಮಾಡಿದರೆ ಯಾವುದೇ ಹೆಣ್ಣನ್ನು ಒಲಿಸಿಕೊಳ್ಳಬಲ್ಲೆ ಎಂದು ಮಹಿಳೆಯರ ಎದುರು ಕೊಚ್ಚಿಕೊಳ್ಳುವುದನ್ನು ಆಕೆ ವಿಸ್ಮಯದಿಂದ ಗಮನಿಸಿದ್ದಾಳೆ. ಎರಡು ದಿನಗಳ ಹಿಂದೆ ಅವನು ಇವಳನ್ನು ಮೋಟಾರ್ ಸೈಕಲ್ ಮೇಲೆ ಮನೆಗೆ ಬಿಡಬೇಕಾದರೆ ಮಳೆಯಲ್ಲಿ ಇಬ್ಬರೂ ತೊಯ್ದರಂತೆ. ಅವನನ್ನು ಮನೆಯೊಳಗೆ ಕರೆದು ಟವಲ್ ಕೊಟ್ಟು ಒರೆಸಿಕೊಳ್ಳಲು ಹೇಳಿದಳು. ಆಕೆ ಬಟ್ಟೆ ಬದಲಾಯಿಸುವಾಗ ಆತ ಅನಿರೀಕ್ಷಿತವಾಗಿ ಹಿಂದಿನಿಂದ ತಬ್ಬಿಕೊಂಡ. ಅವನ ಅಪ್ಪುಗೆಯ ಆವೇಶದಲ್ಲಿ ಕರಗಿ ಹೋದಳು. ಆಮೇಲೆ ಏನಾಯಿತೋ ಗೊತ್ತಿಲ್ಲ. ಆಕೆಗೆ ಅರಿವು ಬಂದಾಗ ಸಂಭೋಗ ಮುಗಿದೇಬಿಟ್ಟಿತ್ತು. 'ಡಾಕ್ಟರ್, ಗಂಡನನ್ನು ಒಳಸೇರಿಸಿಕೊಳ್ಳಲು ವರ್ಷವಾದರೂ ಸಾಧ್ಯವಾಗಲಿಲ್ಲ. ಆದರೆ ಈ ಹುಡುಗ ನನ್ನೊಳಗೆ ಸೇರಿಬಿಟ್ಟಿದ್ದು ನನಗೆ ಗೊತ್ತೇ ಆಗಲಿಲ್ಲ!' ಎಂದಾಕೆ ಉದ್ಗರಿಸಿದ್ದು ನನಗಿನ್ನೂ ನೆನಪಿದೆ.

ಸಮೂಹಪ್ರಜ್ಞೆಯ ಜೊತೆಗೆ ಗುರುತಿಸಿಕೊಳ್ಳುವಾಗ ಬಳುವಳಿಯಾಗಿ ಬಂದಿರುವ ಸಂದಿಗ್ಧಾಳ ನೋವನ್ನು ಹೇಗೆ ಬಗೆಹರಿಸಿದೆ ಎಂಬುದನ್ನು ಮುಂದಿನ ಸಲ ಹೇಳುತ್ತೇನೆ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.